**"ಇ-ಮೇಲ್ ಮುಖಾಂತರ ಮಾತ್ರ"**

ONO 2734/25
10/6/25

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉತ್ತರಕನ್ನಡ, ಕಾರವಾರ

**ದಿನಾಂಕ: 10/06/2025**

## ಸುತ್ತೋಲೆ

ಉತ್ತರ ಕನ್ನಡ ನ್ಯಾಯಾಂಗ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲಿಪಿಕ ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಭಾಗ-4 ಪುನರ್ ಅವಲೋಕನೆ (Review) ಮತ್ತು ಭಾಗ-5 ಅಂಗೀಕಾರ (Acceptance) ಇವುಗಳನ್ನು ಪರಿಗಣಿಸುವಾಗ ಕೆಲವು ಪೀಠಾಸೀನಾಧಿಕಾರಿಗಳು ಈ ಕೆಳಗಿನ ತಪ್ಪುಗಳನ್ನು ಮಾಡಿರುವದು ಗಮನಕ್ಕೆ ಬಂದಿದ್ದು ಇರುತ್ತದೆ.

1) ಭಾಗ-3 ವರದಿ(Report)ಯಲ್ಲಿನ ನಮೂನೆಯಲ್ಲಿ ಉತ್ತರಗಳನ್ನು ಅಂಕಣದಲ್ಲಿ ಸರಿ (✓) ಗುರುತನ್ನು ಹಾಕಿರುತ್ತಾರೆ.

2) ಭಾಗ-3 ವರದಿ(Report)ಯಲ್ಲಿನ ಉತ್ತರಗಳಿಗೆ ಮಹೋನ್ನತ (Outstanding) ಸಾಮಾನ್ಯಕ್ಕಿಂತ ಕಡಿಮೆ (Below average) ಮೌಲ್ಯಾಂಕನ ನೀಡಿರುವ ಕಡೆ ಅದಕ್ಕೆ ಸಮರ್ಥಿಸುವ ಯಾವುದೇ ಕಾರಣ ನಮೂದಿಸದೇ ಇರುವುದು .

3) ಭಾಗ-3 ವರದಿ(Report)ಯನ್ನು ನಿಗದಿತ ನಮುನೆಯಂತೆ ಪೂರ್ಣವಾಗಿ ಭರ್ತಿ ಮಾಡದೇ ಇರುವುದು.

4) ಭಾಗ-4 ಪುನರಾವಲೋಕನ (Review) ಭರ್ತಿ ಮಾಡಿರುವುದು.

**ಮೇಲಿನ ನಮೂದುಗಳಿಗೆ ಸಂಬಂಧಿಸಿದಂತೆ, ಕ್ರಮವಾಗಿ ಈ ಕೆಳಗಿನಂತೆ ನಮೂದಿಸುವುದು.**

1) ಭಾಗ-3 ವರದಿ(Report)ಯಲ್ಲಿನ ನಮೂನೆಯಲ್ಲಿ ಉತ್ತರಗಳನ್ನು ಅಂಕಣದಲ್ಲಿ ಸರಿ (✓) ಗುರುತನ್ನು ಮಾಡದೇ ಬರವಣಿಗೆಯಲ್ಲಿ ನಮೂದಿಸುವುದು.

2) ಭಾಗ-3 ವರದಿ(Report)ಯಲ್ಲಿನ ಉತ್ತರಗಳಿಗೆ ಮಹೋನ್ನತ (Outstanding) ಅಥವಾ ಸಾಮಾನ್ಯಕ್ಕಿಂತ ಕಡಿಮೆ (Below average) ಮೌಲ್ಯಾಂಕನ ನಮೂದಿಸಿದಲ್ಲಿ ಅವುಗಳಿಗೆ ವಿವರವಾದ ಸಕಾರಣವನ್ನು ನೀಡುವುದು.

3) ಭಾಗ-3 ವರದಿ(Report)ಯನ್ನು ನಿಗದಿತ ನಮೂನೆಯಂತೆ ಎಲ್ಲಾ ಪ್ರಶ್ನಾವಳಿಗಳನ್ನು ಪೂರ್ಣ ನಮೂದಿಸುವುದು.

4) ಭಾಗ-4 ಪುನರಾವಲೋಕನ (Review) ನಮೂದಿಸುವಂತಿಲ್ಲ.

ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ನಮೂದಿಸುವಾಗ ಮೇಲಿನಂತೆ ನಮೂದಿಸಲು ಕ್ರಮಕೈಗೊಳ್ಳಲು ಈ ಮೂಲಕ ನಿರ್ದೇಶಿಸಲಾಗಿದೆ.

10/6/15

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ.

1. ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,(ಶಿರಸಿ ಪೀಠ)
2. ಹಿರಿಯ ಸಿವಿಲ್ ನ್ಯಾಯಾಧೀಶರು, ಕಾರವಾರ/ಅಂಕೋಲಾ/ಕುಮಟಾ/ಹೊನ್ನಾವರ/ಭಟ್ಕಳ/ಶಿರಸಿ/ಯಲ್ಲಾಪುರ/ಹಳಿಯಾಳ.
3. ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಕಾರವಾರ/ಅಂಕೋಲಾ/ಕುಮಟಾ/ಹೊನ್ನಾವರ/ಭಟ್ಕಳ/ಶಿರಸಿ/ಸಿದ್ದಾಪುರ/ಯಲ್ಲಾಪುರ/ಹಳಿಯಾಳ/ದಾಂಡೇಲಿ/ಮುಂಡಗೋಡ.